ಈ) ದಿನಾಂಕ: 06/02/1997 ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ತರಲಾಗಿರುತ್ತದೆ.

ಊ) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ ದ್ವಿತೀಯ ದರ್ಜೆ ಸಹಾಯಕರು ಸಹಿತ ಬೆರಳಚ್ಚುಗಾರರ ಹುದ್ದೆಗೆ ವೃಂದ ಮತ್ತು ನೇಮಕಾತಿ ನಿಯಮಗಳು ದಿ:26/03/1990ರ ವರೆಗೆ ಇರದಿದ್ದ ಕಾರಣ ಸದರಿ ಹುದ್ದೆಗೆ ನಿಯಮಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/111/ಡಿಜಿಎ/1998, ದಿ: 26/03/1990ರಲ್ಲಿ ರಚಿಸಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಮಂಜೂರಾಗಿರುವ ಹುದ್ದೆಗಳು

1987(2444) ಶ್ರೀ ಎಂ.ಜೆ. ಅಪ್ಪಾಜಿ (ಭದ್ರಾವತಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ 1973ರಲ್ಲಿದ್ದಂತೆ ಮಂಜೂರಾಗಿದ್ದ ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು ಹಾಗೂ ಅಧೀಕ್ಷಕ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕ್ಲರ್ಕ್ ಕಂ ಟೈಪಿಸ್ಟ್ ಹುದ್ದೆಗಳನ್ನು ಮೊಟ್ಟಮೊದಲ ಬಾರಿಗೆ ಯಾವಾಗ ರಚಿಸಲಾಯಿತು; ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗಿದೆ;

ಇ) ಇದಾದ ನಂತರ ಕ್ಲರ್ಕ್ ಕಂ ಟೈಪಿಸ್ಟ್ ಹುದ್ದೆಗಳನ್ನು ಮಂಜೂರು ಮಾಡಲಾಗಿದೆಯೇ; ಮಾಡಿದ್ದಲ್ಲಿ ವರ್ಷವಾರು ವಿವರ ನೀಡುವುದು;

ಈ) ಪ್ರಸ್ತುತ ಎಷ್ಟು ಜನ ಕ್ಲರ್ಕ್ ಕಂ ಟೈಪಿಸ್ಟ್ ವೃಂದದ ನೌಕರರಿಗೆ ಪ್ರಥಮ ದರ್ಜೆ ಸಹಾಯಕರಾಗಿ ಬಡ್ತಿ ನೀಡಲಾಗಿದೆ? ಹಾಲಿ ಎಷ್ಟು ಜನ ನೌಕರರಿಗೆ ಬಡ್ತಿ ನೀಡಬೇಕಾಗಿದೆ?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ 1973ರಲ್ಲಿದ್ದಂತೆ ಮಂಜೂರಾದ ಹುದ್ದೆಗಳ ವಿವರ ಈ ಕೆಳಗಿನಂತಿದೆ.

1.	ಪ್ರಥಮ ದರ್ಜೆ ಸಹಾಯಕರು	-	498
2.	ದ್ವಿತೀಯ ದರ್ಜೆ ಸಹಾಯಕರು	-	2075
3.	ಅಧೀಕ್ಷಕರು	-	134

ಆ) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕ್ಲರ್ಕ್ ಕಂ ಟೈಪಿಸ್ಟ್ ಹುದ್ದೆಗಳನ್ನು ಮೊಟ್ಟಮೊದಲ ಬಾರಿಗೆ ದಿನಾಂಕ: 06/02/1973 ರಿಂದ ರಚಿಸಲಾಗಿದೆ. ಈ ಹುದ್ದೆಗಳನ್ನು ದಿನಾಂಕ: 12/12/1973 ರಿಂದ ಭರ್ತಿ ಮಾಡಲಾಗಿದೆ.

ಇ) ಹೌದು. ಕ್ಲರ್ಕ್ ಕಂ ಟೈಪಿಸ್ಟ್ ಹುದ್ದೆಗಳನ್ನು ಈ ಕೆಳಕಂಡಂತೆ ಮಂಜೂರು ಮಾಡಿದೆ.

ವರ್ಷ	ಮಂಜೂರಾದ ಹುದ್ದೆಗಳ ಸಂಖ್ಯೆ
1	2
1972-1973	109
1974-1975	10
1975-1976	40
1976-1977	40
1977-1978	40

1	2
1979-1980	01
1981-1982	26
1983-1984	62
ರಿಂದ ಈವರೆಗೆ	
ಒಟ್ಟು	328

ಈ) ಪ್ರಸ್ತುತ ದ್ವಿತೀಯ ದರ್ಜೆ ಸಹಾಯಕ ಸಹಿತ ಬೆರಳಚ್ಚುಗಾರರ ಹುದ್ದೆಯಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ಪಡೆದವರ ಸಂಖ್ಯೆ: 158 ಹಾಲಿ 206 ಮಂದಿ ದ್ವಿತೀಯ ದರ್ಜೆ ಸಹಾಯಕ ಸಹಿತ ಬೆರಳಚ್ಚುಗಾರರಿಗೆ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಬಡ್ತಿ ನೀಡಬೇಕಾಗಿದೆ. ನಿಯಮಗಳ ಪ್ರಕಾರ ಈ ವೃಂದದವರಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಯ ಬಡ್ತಿ ಹುದ್ದೆಗಳಲ್ಲಿ ಶೇಕಡಾ 5ರಂತೆ ಬಡ್ತಿಗೆ ಅವಕಾಶವಿದೆ. ಹುದ್ದೆಗಳು ಲಭ್ಯವಾದಂತೆ ನಿಯಮಾನುಸಾರ ಈ ವೃಂದದವರಿಗೆ ಬಡ್ತಿ ನೀಡಲಾಗುವುದು.

ಬೆಳಗಾವಿ ಜಿಲ್ಲೆಯ ಸಂಕೇಶ್ವರದಲ್ಲಿ ನೂರು ವಸತಿ ಯೋಜನೆ

1988(2619) ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯ ಸಂಕೇಶ್ವರದಲ್ಲಿ 100 ವಸತಿ ಯೋಜನೆ ಅಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳಾವುವು; ಅದರಲ್ಲಿ ವಿವಿಧ ಅಳತೆಯ ಎಷ್ಟು ನಿವೇಶನ: ಮನೆಗಳ ನಿರ್ಮಾಣ ಮಾಡಲಾಗುತ್ತಿದೆ;

ಆ) ಈ ಯೋಜನೆಗೆ ಅರ್ಜಿಯನ್ನು ಎಂದು ಸ್ವೀಕರಿಸಲಾಯಿತು, ಎಂದು ಚಾಲನೆಗೊಳಿಸಲಾಯಿತು ಹಾಗೂ ಎಂದು ಮುಕ್ತಾಯಗೊಳಿಸಲಾಗುವುದು;

ಇ) ವಿವಿಧ ವರ್ಗಗಳ ನಿವೇಶನ : ಮನೆಗಳಿಗೆ ನಿಗಧಿಪಡಿಸಿರುವ ದರ ಹಾಗೂ ಬಂದಿರುವ ಅರ್ಜಿಗಳೆಷ್ಟು ಹಾಗೂ ಹಂಚಿಕೆ ಯಾವ ರೀತಿ ಮಾಡಲಾಗುವುದು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು):

ಅ) ಕರ್ನಾಟಕ ಗೃಹ ಮಂಡಳಿಯ 100 ವಸತಿ ಯೋಜನೆಯಡಿಯಲ್ಲಿ ಬೆಳಗಾವಿ ಜಿಲ್ಲೆಯ ಸಂಕೇಶ್ವರ ಪಟ್ಟಣದ ರಿ.ಸ.ನಂ. 275/1 ಮತ್ತು 275/2 ಎ ರಲ್ಲಿ ವಸತಿ ಯೋಜನೆಯನ್ನು ಕೈಗೊಂಡಿದೆ. ಇದರಲ್ಲಿ ನಿರ್ಮಿಸಲು ಉದ್ದೇಶಿಸಲಾದ ನಿವೇಶನ/ಮನೆಗಳ ವಿವರ ಈ ಕೆಳಕಂಡಂತಿದೆ:

ನಿವೇಶನ

ಕಡಿಮೆ ಆದಾಯ ವರ್ಗ	ಮಧ್ಯಮ ಆದಾಯ ವರ್ಗ	ಹೆಚ್ಚಿನ ಆದಾಯ ವರ್ಗ	ಒಟ್ಟು
14	24	05	43
	ಮನೆಗಳು		
38	49	-	87

ಆ) ಈ ಯೋಜನೆಗೆ ದಿನಾಂಕ:23-12-2002 ರಿಂದ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ. ಈ ಯೋಜನೆಗಳಿಗಾಗಿ ಈ ಹಿಂದೆ ಅರ್ಜಿ ಸಲ್ಲಿಸಿರುವವರನ್ನು ಸಹ ಹಂಚಿಕೆಗೆ